# ನಗರಸಭಾ ಕಾರ್ಯಾಲಯ, ರಾಮನಗರ

ನಸರಾ/ಕಾವಿ/ಟೆಂಡರ್/5/2006–07 ದಿ: 28.08.2006

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2006–07 ನೇ ಸಾಲಿನಲ್ಲಿ ನೊಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ ಎಸ್.ಎಫ್.ಸಿ. ನಿಧಿ ಮತ್ತು ಶೇ.18ರ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ನಿಗಧಿತ ನಮೂನೆಯಲ್ಲಿ ಮೊಹರಾದ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೊಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ಕೋರಿಕೆ ದಿ: 12.09.2006 ಸಾಯಂಕಾಲ 4.00 ಘಂಟೆಯೊಳಗಾಗಿ ಎಸ್.ಎಫ್.ಸಿ. ಅನುದಾನದಡಿಯಲ್ಲಿ ಕರೆದಿರುವ ಕಾಂಗಾರಿಗಳಿಗೆ ಮತ್ತು ಕ್ರ.ಸಂ.14ರ ಕಾಮಗಾರಿಗೆ ಅರ್ಜಿ ಸಲ್ಲಿಸಬಯಸುವವರು ಫಾರಂ ಶುಲ್ಕ ರೂ. 500.00 + ತೆರಿಗೆ ಹಾಗು ಶೇ.18 ರ ಅನುದಾನದಡಿಯಲ್ಲಿ ಕರೆದಿರುವ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಬಯಸುವವರು ಫಾರಂ ಶುಲ್ಕ 300.00 + ತೆರಿಗೆ ಪಾವತಿಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 16.09.2006 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 20.09.2006 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗು ಟೆಂಡರ್‌ಗಳನ್ನು ಸಾಧ್ಯವಾದರೆ ಆದೇ ದಿನ ಅಥವಾ ಮುಂದಿನ ದಿನಗಳಲ್ಲಿ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.1

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಅಥವಾ ರಾಷ್ಟ್ರೀಯ ಉಳಿತಾಯ (NSC) ಪತ್ರವನ್ನು (ಹಾಲಿ ಚಾಲ್ತಿಯಲ್ಲಿರುವ) ಪೌರಾಯುಕ್ತರಿಗೆ ಪ್ಲೆಡ್ಜ್ ಮಾಡಿ ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ/ NSC ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ದರಾಗಿರತಕ್ಕದ್ದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಠವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ದರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

PDF Created with deskPDF PDF Writer - Trial :: http://www.docudesk.com

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಹತ್ತನೇ ಷರತ್ತಿನಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರು ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಚಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ದರಪಟ್ಟಿ ಮಂಜೂರಾತಿಯು ನಗರಸಭೆ ಕಾಯ್ದೆ ನಿಯಾವಳಿಯಂತೆ ಮಂಜೂರಾತಿ ಕಾಯ್ದಿರಿಸಲಾಗಿದೆ.

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಟಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ/ಹಿಂತೆಗೆದುಕೊಳ್ಳುವ ರದ್ದು ಪಡಿಸುವ ಹಕ್ಕನ್ನು ಈ ಕೆಳ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಯಿಸತಕ್ಕದ್ದು.

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಠಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸಿರುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ತಿರಸ್ಕರಿಸಲಾಗುವುದು.

17. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಗಳಲ್ಲಿ) | ಇ.ಎಂ.ಡಿ | ಕೆಲಸ ಪೂರ್ಣ ಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| SFC Grant (2 ನೇ ಕರೆ) | | | | | |
| 1 | ವಾರ್ಡ್ ನಂ. 11 ರ ಗೌಸಿಯ ನಗರದ ಬಾಬು ಮನೆಯಿಂದ .ಷಫಿ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1,46,000 | 3,650 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 2 | ವಾರ್ಡ್ ನಂ. 11 ರ ಗೌಸಿಯ ನಗರದ ಆಬ್ದುಲ್ ಖಾದರ್ ಮನೆಯಿಂದ ಅಮೀರ ಜಾನ್ ಮನೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ | 1,01,000 | 2,525 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 3 | ವಾರ್ಡ್ ನಂ. 12 ರ ಟಿಪ್ಪುನಗರ ಸಯ್ಯದ್ ಮನೆ, ಇಂತಿಯಾಜ್ ಮತ್ತು ಆಡ್ಡ ರಸ್ತೆಗಳಲ್ಲಿ ಚಪ್ಪಡಿ ಚರಂಡಿ ನಿರ್ಮಾಣ | 4,44,000 | 11,100 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 4 | ವಾರ್ಡ್.ನಂ.23 ರ ಟಿಪ್ಪುನಗರದ ಕೊತ್ತಿಪುರ ರಸ್ತೆಯಿಂದ ಕೇಬಲ್ ಫಯಾಜ್ ಮನೆವೆರೆಗೆ, ಅಬ್ದುಲ್ ಕರೀಂ ಮನೆ ಅಮಾನ್ ಮನೆ ಮತ್ತು ಅನ್ವರ್ ಸಾಬ್ ಮನೆಯಿಂದ ಬಸ್‌ಲಾಲ್ ಮನೆವರೆಗೆ ಚರಂಡಿ ನಿರ್ಮಾಣ. | 3,40,000 | 8,500 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 5 | ವಾರ್ಡ್.ನಂ.23 ರ ಟಿಪ್ಪುನಗರದ ಕೊತ್ತಿಪುರ ರಸ್ತೆಯಿಂದ ಕೇಬಲ್ ಫಯಾಜ್ ಮನೆವೆರೆಗೆ, ಅಬ್ದುಲ್ ಕರೀಂ ಮನೆ ಅಮಾನ್ ಮನೆ ಮತ್ತು ಅನ್ವರ್ ಸಾಬ್ ಮನೆಯಿಂದ ಬಸ್‌ಲಾಲ್ ಮನೆವರೆಗೆ ರಸ್ತೆ ಅಭಿವೃಧ್ಧಿ ಮಾಡುವುದು. | 3,72,000 | 9,300 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 6 | ವಾರ್ಡ್.ನಂ.24 ರ ಯಾರುಬ್ ನಗರದ 2ನೇ ಬ್ಲಾಕ್‌ನ ನೂರಾನಿ ಶಾದಿ ಮಹಲ್ ಹತ್ತಿರ, ಮುಷೀರ್ ಅಹಮದ್ ಮನೆ ಹತ್ತಿರ ಮತ್ತು ನಬೀ ಖಾನ್ ಮನೆ ಹತ್ತಿರ ಚರಂಡಿ ನಿರ್ಮಿಸುವುದು. | 3,02,000 | 7,550 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 7 | ವಾರ್ಡ್ ನಂ 8 ಮತ್ತು 9 ರಲ್ಲಿ ಬರುವ ಎಂ.ಜಿ. ರಸ್ತೆಯ ವಾಣಿ ಕ್ಲೀನಿಕ್‌ನಿಂದ ಬಸವೇಶ್ವರ ದೇವಸ್ಥಾನದವರೆಗೆ ಮತ್ತು ಎಂ.ಜಿ.ರಸ್ತೆಯಿಂದ ಪಂಚಮುಖಿ ಸರ್ಕಲ್‌ವರೆಗೆ ರಸ್ತೆ ಅಭಿವೃದ್ದಿ ಪಡಿಸುವುದು | 2,10,000 | 5,250 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| | ಶೇ. 18 ರ ಅನುದಾನ | | | | |
| 1 | ವಾರ್ಡ್ ನಂ.1ರ ಚಾಮುಂಡಿಪುರದ ನಾರಾಯಣಪ್ಪನ ಮನೆ ಹತ್ತಿರ ಡೆಕ್ ಸ್ಲಾಬ್ ನಿರ್ಮಾಣ. | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 2 | ವಾರ್ಡ್ ನಂ.2 ರ ಸ್ವೀಪರ್ ಕಾಲೋನಿಯಲ್ಲಿ ಚರಂಡಿ ನಿರ್ಮಾಣ ಮಾಡುವುದು | 45,000 | 1200 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 3 | ವಾರ್ಡ್ ನಂ.3ರ ಗಾಂಧೀನಗರದ ಯೋಗಿ ನಾರಾಯಣ ದೇವಸ್ಥಾನದ ಉತ್ತರ ಭಾಗದಲ್ಲಿ ಕಾಂಪೌಂಡ್ ನಿರ್ಮಾಣ | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 4 | ವಾರ್ಡ್ ನಂ.4ರ ಮೇದರ್‌ಬೀದಿ ಪಕ್ಕದಲ್ಲಿರುವ ಬೋವಿ ಸ್ಮಶಾನದ ಕಾಂಪೌಂಡ್ ರಿಪೇರಿ | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 5 | ವಾರ್ಡ್ ನಂ.5ರ ಕಾಯಿಸೊಪ್ಪಿನ ಬೀದಿಯ ಗಂಗಪ್ಪನ ಮನೆ ಹತ್ತಿರ ಡಾಂಬರೀಕರಣ ಕಾಮಗಾರಿ | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 6 | ವಾರ್ಡ್ ನಂ.16 & 17 ರ ಅರಳಿಮರದ ರಸ್ತೆಯಲ್ಲಿ ಮಿನಿಟ್ಯಾಂಕ್‌ನಿಂದ ಶಾಲೆತನಕ ಎಡಭಾಗದಲ್ಲಿ ಚರಂಡಿ ದುರಸ್ಥಿ ಕಾಮಗಾರಿ | 88,000 | 2200 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 7 | ವಾರ್ಡ್ ನಂ.22ರ ಜನತಾ ಕಾಲೋನಿಯಲ್ಲಿ ಚರಂಡಿ ನಿರ್ಮಾಣ | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |

PDF Created with deskPDF PDF Writer - Trial :: http://www.docudesk.com

| | | | | | |
|---|---|---|---|---|---|
| 8 | ವಾರ್ಡ್ ನಂ.26ರ ಐಜೂರು ಗುಡ್ಡೆಯ ದರ್ಗದ ಹತ್ತಿರ ದೊಡ್ಡ ಮೋರಿಯ ಮೇಲೆ ಡೆಕ್‌ಸ್ಲಾಬ್ ಹಾಕುವುದು | 36,000 | 900 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 9 | ವಾರ್ಡ್ ನಂ.27ರ ಲಿಯೋ ಟೆಂಟ್ ಹಿಂಭಾಗದಲ್ಲಿ ಚರಂಡಿ ನಿರ್ಮಾಣ | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 10 | ವಾರ್ಡ್ ನಂ.30ರ ಐಜೂರು ಮಲ್ಲೇಶ್ವರ ಬಡಾವಣೆಯ ರಂಗಸ್ವಾಮಿ ಮನೆ ಹತ್ತಿರ ಚರಂಡಿ ನಿರ್ಮಾಣ | 69,000 | 1800 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 11 | ವಾರ್ಡ್ ನಂ.31ರ ಅರ್ಚಕರಹಳ್ಳಿ ಹರಿಜನ ಕಾಲೋನಿಯ ಸ್ಮಶಾನದ ಹತ್ತಿರ ಚರಂಡಿ ನಿರ್ಮಾಣ | 30,000 | 750 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 12 | ವಾರ್ಡ್ ನಂ.20ರ ತುರುಪಲಾಯದ ಚರಂಡಿ ನಿರ್ಮಾಣ. | 25,000 | 630 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 13 | ಕೊತ್ತಿಪುರದಲ್ಲಿ ಸಮುಧಾಯ ಭವನ ನಿರ್ಮಾಣ | 65,000 | 1650 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |
| 14 | ವಾರ್ಡ್.ನಂ.28 ರ ಐಜೂರು ಹರಿಜನ ಕಾಲೋನಿಯಲ್ಲಿ ಸಮುಧಾಯ ಭವನ ನಿರ್ಮಾಣ. | 2,00,000 | 5000 | 90 ದಿನಗಳು | 3ನೇ ದರ್ಜೆ ಮತ್ತುಮೇಲ್ಪಟ್ಟು |

(ಸೈಯದ್ ಖಿಜರ್ ಪಾಷ)
ಅಧ್ಯಕ್ಷರು
ನಗರಸಭೆ,ರಾಮನಗರ

(ಶಿವಣ್ಣ)
ಪೌರಾಯುಕ್ತರು
ನಗರಸಭೆ,ರಾಮನಗರ

PDF Created with deskPDF PDF Writer - Trial :: http://www.docudesk.com